ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

◆ ಎಮ್ಮೆಗೂ, ಎಮ್ಮೆಲ್ಲೆಗೂ ಏನು ವ್ಯತ್ಯಾಸ?



ಎಮ್ಮೆಯಿಂದ ಚೊಂಬು ಹಾಲು; ಎಮ್ಮೆಲ್ಲೆಯಿಂದ ಚೊಂಬು.

ರಮಾನಂದ ಶರ್ಮಾ, ಬೆಂಗಳೂರು

◆ ಮೊಬೈಲ್ ಇಲ್ಲದ ಕರವನ್ನು ಕಾಣಲು ಸಾಧ್ಯವೆ?

ಸಾಧ್ಯ. ಬಹಳ ಜನರು ಈಗ ಹ್ಯಾಂಡ್ಸ್ ಫ್ರೀ ಬಳಸುತ್ತಾರೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಮಂಡಿಗೂ, ಮಂಡೆಗೂ ವ್ಯತ್ಯಾಸವೇನು?

ಪ್ರೊಪೋಸ್ ಮಾಡುವಾಗ ಮಂಡಿ ಬಾಗುತ್ತದೆ; ಲಗ್ನದ ನಂತರ ಮಂಡೆ ಬಾಗುತ್ತದೆ.

ಎನ್.ವಿ. ಶ್ರೀನಿವಾಸ್, ಮೈಸೂರು

◆ ಕರ್ನಾಟಕದಲ್ಲಿ ಇದ್ದುಕೊಂಡೇ ಕನ್ನಡವನ್ನೂ, ಕನ್ನಡಿಗರನ್ನೂ ದ್ವೇಷಿಸುವ ಪರಭಾಷಿಗರಿಗೆ ಏನೆನ್ನ ಬೇಕು?




ಏನು ಬೇಕಾದರೂ ಅನ್ನಿ, ಕನ್ನಡದಲ್ಲಿ ಅನ್ನಿ. ನಿಮಗೆ ಬೈದ ತೃಪ್ತಿ, ಅವರಿಗೆ ಅರ್ಥವಾಗದ ನಿರಾಳ.

ಅಮರಯ್ಯಾ ಪತ್ರಿಮಠ, ಸುರಪುರ

◆ ಅಂತರಂಗ ಶುದ್ಧವಾಗೋದ್ಯಾವಾಗ?

ವಿವೇಕದ ಪೊರಕೆಯಿಂದ ಗುಡಿಸಿದಾಗ.

ಮರುಳಾರಾಧ್ಯ, ಅದವಾನಿ

◆ ಬೆಳ್ಳಂಬೆಳಗ್ಗೇನೇ ಐಟಿ ಅಧಿಕಾರಿಗಳು ದಾಳಿ ನಡೆಸುವುದೇಕೆ?

ದಿನವಿಡೀ ಚಾನಲ್‌ಗಳಿಗೆ ಬ್ರೇಕಿಂಗ್ ನ್ಯೂಸ್ ಕೊಡಬಹುದಲ್ಲ! **Early bird catches the news headlines.**

ಕಣ್ಣೂರು ಗೋವಿಂದಾಚಾರಿ, ಮೈಸೂರು

◆ ಹಾಲು ಕೊಡುವ ಹಸುವಿಗೆ ಇರುವ ಗೌರವ ಹಾಲು ಕೊಡುವ ಎಮ್ಮೆಗೆ ಏಕಿಲ್ಲ?

**Marketing error.** ಪುಣ್ಯಕೋಟಿ ಎಂಬ ಎಮ್ಮೆಯು... ಎಂಬ ಹಾಡಿದ್ದಿದ್ದರೆ ಎಮ್ಮೆಗೇ ಗೌರವ ಇರುತ್ತಿತ್ತು.

ನಾ.ಕು. ಗಣೇಶ್, ಬೆಂಗಳೂರು

◆ ಅರ್ಜಿ ಸಲ್ಲಿಸಿ, ಕಾಡಿಬೇಡಿ, ಪ್ರಭಾವ ಬೀರಿ ಪ್ರಶಸ್ತಿ ಪಡೆಯುವವರು ಸ್ವಾಭಿಮಾನಿಗಳು ಎನಿಸಿಕೊಳ್ಳಲು ಅರ್ಹರೆ?

ಊಹೂಂ. ಮಾನವನ್ನೇ ಮಾರಿಕೊಳ್ಳುವ ಅಪಕೀರ್ತಿ ಎನ್ನಬಹುದು.

ಬಿ. ಚಂದ್ರೇಗೌಡ, ಬೆಂಗಳೂರು

◆ ಗೆಲುವಿಗೆ ಸಾವಿರ ಅಪ್ಪಂದಿರು; ಸೋಲು ಅನಾಥ. ಹೀಗೇಕೆ ಗುರುಗಳೆ?

ಸೋತವರು ಪಾರ್ಟಿ ಕೊಡಿಸುವುದಿಲ್ಲವಲ್ಲ.

ಮಾಲತಿ ರಾಜು, ಬೆಂಗಳೂರು

◆ ಗಣಿಗೂ, ಗುಣಿಗೂ ಇರುವ ವ್ಯತ್ಯಾಸವೇನು?

ಅಲ್ಲಿ ಬಂಗಾರದ ನಿಕ್ಷೇಪ; ಇಲ್ಲಿ ಭಂಗುರದ ಕ್ಷೇಪ.

ನರಸಿಂಹ ಪೈ, ಹೊನ್ನಾವರ

◆ ಮರ ಬಾಡುವುದಕ್ಕೂ, ಮನ ಬಾಡುವುದಕ್ಕೂ ಏನು ವ್ಯತ್ಯಾಸ?

ಮರ ಬಾಡಿದರೆ ಶಾಖಕ್ಕೆ ನಾಂದಿ; ಮನ ಬಾಡಿದರೆ ಶೋಕಕ್ಕೆ ನಾಂದಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಸತಿಗೂ, ಸವತಿಗೂ ಏನು ವ್ಯತ್ಯಾಸ?

ಸತಿಯಿಂದ ಸದನ; ಸವತಿಯಿಂದ ಕದನ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

◆ ಬೆಕ್ಕು ಅಡ್ಡ ಬಂದಾಗ ಅಪಶಕುನ ಎನ್ನುವ ನಾವು ನಾಯಿ ಅಡ್ಡ ಬಂದಾಗ ಬಿದ್ದು ಅಪಘಾತಕ್ಕೀಡಾಗುವುದು ಏಕೆ?

ಮನುಜ ಬೆಕ್ಕೆಂದರೆ ಎಚ್ಚರ ವಹಿಸುವುದರಿಂದ ಕೇಡಿನ ಕೆಲಸಗಳನ್ನು ಬೆಕ್ಕು ನಾಯಿಗೆ ಔಟ್‌ಸೋರ್ಸ್ ಮಾಡಿದೆಯಂತೆ.

ಶಿವಕುಮಾರ್ ಕಾಳೀಹುಂಡಿ, ಮೈಸೂರು

## ಬಹುಮಾನಿತ ಪ್ರಶ್ನೆ

ಎ.ಕೆ. ಪಟ್ಟಾಭಿ, ಬೆಂಗಳೂರು

◆ ಇಂಗ್ಲಿಷ್ ಕಲಿತವ ಪ್ರಪಂಚ ಸುತ್ತಬಲ್ಲ; ಹಿಂದಿ ಕಲಿತವ ದೇಶ ಸುತ್ತಬಲ್ಲ. ಕನ್ನಡ ಕಲಿತವ?

ಹೊಂದಾಣಿಕೆ ಹುಟ್ಟುಗುಣವಾದ್ದರಿಂದ ಎಲ್ಲಿದ್ದರೂ ಬದುಕಿಕೊಳ್ಳಬಲ್ಲ.

◆ ನಗು ನೀ ನಗು; ಕಿರುನಗೆ ನಗು; ಎಂದು ಹಾಡುವಳಲ್ಲಾ, ಏಕೆ ರಾಮ್‌ಜೀ?

ಜೋರುನಗೆ ನಕ್ಕರೆ ಹುಳುಕುಹಲ್ಲು ಕಂಡೀತೆಂಬ ಕಾಳಜಿ.

ವಿಜಯಕುಮಾರ್, ದಾವಣಗೆರೆ

◆ ರಾಜಕೀಯದಲ್ಲಿ ಒಬ್ಬರ ಮೇಲೊಬ್ಬರು ಮಾಡುವ ಕೆಸರೆರಚಾಟ ಇಲ್ಲದೆ ಗೆಲ್ಲುವುದು ಅಸಾಧ್ಯವೆ?

ಸಾಧನೆಯಿದ್ದರೆ ಸಾಧ್ಯ. ಆದರೆ ಈಗಿನವರ ಏಕೈಕ ಸಾಧನೆಯೆಂದರೆ ಸಮಯಸಾಧನೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಕತ್ತಲು ಮತ್ತು ಬೆಳಕನ್ನು ತಕ್ಕಡಿಯಲ್ಲಿ ತೂಗಿದರೆ ಯಾವುದು ಹೆಚ್ಚು?



ಕತ್ತಲೇ; ಗಾಢವಾದ ಕತ್ತಲೆ ಇದೆ, ಗಾಢವಾದ ಬೆಳಕಿಲ್ಲ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

◆ ಮೊಸಳೆ ಕಣ್ಣೀರಿಗೂ, ರಾಜಕಾರಣಿಗಳ ಕಣ್ಣೀರಿಗೂ ಏನು ವ್ಯತ್ಯಾಸ?

ಕಣ್ಣೀರು ಸುರಿಸಲು ಮೊಸಳೆ ವಿಕ್ಸ್ ಹಚ್ಚಿದ ಟವಲ್ ಕಣ್ಣಿಗೆ ಒತ್ತಿಕೊಳ್ಳುವುದಿಲ್ಲ.

ಎನ್. ಗೋಪಾಲರಾವ್, ಬೆಂಗಳೂರು

◆ ಸಾವಿನಂಚಿನಲ್ಲಿರುವ ಅಜ್ಜಿಗೆ ಪುಟ್ಟಗೌರಿ ಧಾರಾವಾಹಿಯ ಪುಟ್ಟಗೌರಿ ಮದುವೆ ನೋಡಿ ಸಾಯುವಾಸೆ; ಈಡೇರಬಹುದೆ?

ಹೇಳಲಾಗದು; ಅವಳ ಮದುವೆಗೆ ಮುಂಚೆ ಸೀರಿಯಲ್ಲೇ ಸಾಯುವ ಸಂಭವವಿದೆ.

■ ರಾಮ್